ಹಿನ್ನುಡಿ



ಮೊಗವೀರರಲ್ಲೊಬ್ಬರು ಮೊಗವೀರ ಜನಾಂಗದ ಬಗ್ಗೆ ಒಂದು ಪೂರ್ಣ ಪ್ರಮಾಣದ ಅಧ್ಯಯನ ಮಾಡಿ ಅದನ್ನು ದಾಖಲೀಕರಿಸಬೇಕೆಂಬ ನನ್ನ ಕನಸನ್ನು ಶ್ರೀ ಸದಾನಂದ ಉಚ್ಚಿಲರು ನನಸಾಗಿಸಿದ್ದಾರೆ. ಅದರಲ್ಲಿ ನಾನೂ ಭಾಗವಹಿಸಲು ಅವಕಾಶ ನೀಡಿರುವುದು ನನ್ನ ಭಾಗ್ಯ. ಮೊಗವೀರರು "ಮೊಗವೀರ" ಮಾಸಿಕದಲ್ಲಿ, ಗ್ರಾಮ ಸಭೆ ಯಾ ವಿದ್ಯಾರ್ಥಿ ಸಂಘಗಳ ರಜತ ಯಾ ಸುವರ್ಣ ಮಹೋತ್ಸವಗಳ ನೆನಪಿನ ಸಂಚಿಕೆಯಲ್ಲಿ ಇಲ್ಲವೆ ಸಮಾಜ ಸೇವಕರು ಮೊಗವೀರರ ಬಗ್ಗೆ ಬರೆದಿದ್ದಾರೆ. ಆದರೆ ಶ್ರೀ ಉಚ್ಚಿಲರು  ಹಲವಾರು ವರ್ಷಗಳಿಂದ ನಮ್ಮೆರಡು ಜಿಲ್ಲೆಗಳ ದೇವಸ್ಥಾನ, ದೈವಸ್ಥಾನ, ನಾಗಬನ ಹೀಗೆ ಮೂಲೆ ಮೂಲೆಗೆ ಹೋಗಿ  ದಾಖಲೆಗಳನ್ನು ಸಂಗ್ರಹಿಸಿದ್ದಾರೆ. ದಾಖಲೆಗಳು ಲಭ್ಯವಿಲ್ಲದಲ್ಲಿ (ಹೆಚ್ಚಿನ ಕಡೆ ಇದೇ ಸಮಸ್ಯೆ) ಅವರೇ ಹೇಳಿಕೊಂಡಿರುವಂತೆ "ತರ್ಕಬದ್ಧವಾದ ಊಹೆ"ಯನ್ನು ಅವಲಂಬಿಸಿದ್ದಾರೆ. ತಾರ್ಕಿಕವಾಗಿ ಅವರ ಊಹೆಗಿಂತ ಭಿನ್ನ ಹಾಗೂ ದಾಖಲೆಗಳು ಲಭ್ಯವಿರುವ ಬೇರೆ ವಾದಗಳು ಹುಟ್ಟುವ ತನಕ ಶ್ರೀ ಉಚ್ಚಿಲರ ವಾದವನ್ನು ಒಪ್ಪಬೇಕಾಗಿರುವುದು ಅನಿವಾರ್ಯ.

.ಈ ಪುಸ್ತಕ ಮೊಗವೀರ ಜನ ಜೀವನದ ಕಣ್ಮರೆಯಾದ ಮತ್ತು ಈಗ ಪ್ರಚಲಿತವಿರುವ ಎಲ್ಲ ಮಜಲುಗಳನ್ನು ತೆರೆದಿಡುವುದರ ಜೊತೆಗೆ,  ಪ್ರಸ್ತುತ ಹಾಗು ಭವಿಷ್ಯದ ಸವಾಲುಗಳಿಗೆ ಸ್ಪಂದಿಸುವ ಸಲುವಾಗಿ ಕಿರಿಯರ ಅಸಕ್ತಿ ಮತ್ತು ಚಿಂತನೆಗಳನ್ನು ಕೆದಕುವ ಅಧ್ಯಾಯ "ದತ್ತಾಂಶಗಳ ವಿಶ್ಲೇಷಣೆ"ಯತ್ತ ನಾವು ಗಮನ ಕೊಡಬೇಕಾಗಿದೆ. ಶ್ರೀ ಉಚ್ಚಿಲರು  ನಮ್ಮ ಸಾಂಸ್ಕೃತಿಕ ಬಳುವಳಿ ಮತ್ತು ಇಂದಿನ ಅಗತ್ಯ ಇವೆರಡರ ನಡುವಿನ ಸರ್ವ ಸಮ್ಮತವಾದ ಬದಲಾವಣೆಗಳನ್ನು ಮಾಡಲು ಸಾಧ್ಯವಾಗುವ ನಿಟ್ಟಿನಲ್ಲಿ ಕೆಲವು ಪ್ರಶ್ನೆಗಳನ್ನು ಇಲ್ಲಿ ಎತ್ತಿದ್ದಾರೆ.

ನಮ್ಮ ಸಾಂಪ್ರದಾಯಿಕ ಮೊಗವೀರ ಸಂಘಟನೆಗಳಲ್ಲಿ ನಮ್ಮ ಮೊಗವೀರ ಮಹಿಳೆಯರಿಗೆ ಸದಸ್ಯತ್ವ, ಶಿಕ್ಷಣ ಸಂಸ್ಥೆಗಳು ಮತ್ತು ಧಾರ್ಮಿಕ ಕ್ಷೇತ್ರ ಇವೆರಡರಲ್ಲಿ ಆದ್ಯತೆ, ಗುರು ಪರಂಪರೆ ಮತ್ತು ಗುರಿಕಾರ ಪದ್ದತಿ,"ರಕ್ತಹಾರ" ಇವುಗಳ ಪ್ರಸ್ತುತತೆ, ಪ್ರಶ್ನೆಗಳನ್ನು ಇಲ್ಲಿ ಎತ್ತಿದ್ದಾರೆ.

ಗ್ರಾಮ ಸಭೆಗಳಿಗೆ ಗ್ರಾಮದ ಮೀನುಗಾರಿಕಾ ದೋಣಿಗಳಿಂದ ಸಂದಾಯವಾಗುವ ಪಾಲು, ಮರಣ ಫಂಡು ಮತ್ತು, ಮೀನುಗಾರಿಕೆಯಲ್ಲಿನ ಸಮಪಾಲು (ಸಹಕಾರಿ ಪದ್ಧತಿ) ಇವುಗಳ ಆವಿಷ್ಕಾರ ಮೊಗವೀರರಿಂದಲೆ ಆಗಿದೆ.  ಆಧುನಿಕ ಆರ್ಥಿಕ ಕಲ್ಪನೆಗಳಾದ 'ಟಿ.ಡಿ.ಎಸ್', ಜೀವ ವಿಮೆ, ಸಹಕಾರಿ ಪದ್ದತಿ ಇವೆಲ್ಲ ಮೊಗವೀರರ ಕೊಡುಗೆಯನ್ನು ಸಾರ್ವತ್ರಿಕವಾಗಿ ಗುರುತಿಸಲಾಗಿಲ್ಲವೆಂದು ಶ್ರೀ ಉಚ್ಚಿಲರು ಗಮನ ಸೆಳೆದಿದ್ದಾರೆ.

ಉಳ್ಳಾಲದ ರಾಣಿ ಅಬ್ಬಕ್ಕ ದೇವಿ, ಪೋರ್ಚುಗೀಸರನ್ನು ಮೂರು ಬಾರಿ ಸೋಲಿಸಲು ಸಹಕರಿಸಿದ ಚೆನ್ನಪ್ಪ ಗುರಿಕಾರ, ಕುಂಞ ಮರಕಾಲರಿಗೆ ಇತಿಹಾಸಕಾರರು ನ್ಯಾಯ ಒದಗಿಸಿಲ್ಲ. ಕುಂಞ ಮರಕಾಲನ್ನು ಸೆರೆ ಹಿಡಿದು ಬರ್ಬರವಾಗಿ ಕೊಂದು ದೇಹವನ್ನು ಕೋಟೆಯ ದ್ವಾರಕ್ಕೆ ತೂಗು ಹಾಕಲಾಯಿತೆನ್ನಲಾಗಿದೆ. ಹಾಗಾದರೆ ಕುಂಞ ಮರಕಾಲ ನಮ್ಮ ಸ್ವಾತಂತ್ರ ಸಮರದ ಪ್ರಥಮ ಹುತಾತ್ಮ ರಲ್ಲವೇ ?

ಅದೇ ರೀತಿ 1894ರಲ್ಲಿ ಮುಂಬಯಿಯಲ್ಲಿ ವಾಸವಾಗಿದ್ದ ಸುಮಾರು 1141 ಮೊಗವಿರರು "ಮಣ್ಣುಪ್ಪಿ"ಗೆ ಮದರಾಸು ಸರಕಾರ ಹೇರಿದ ಸುಂಕವನ್ನು ವಿರೋಧಿಸಿ ಬರೆದ ಪತ್ರ ಲಭ್ಯವಿದೆ. ಎಂದರೆ ಮುಂದೆ ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಉಪ್ಪಿನ ಸತ್ಯಾಗ್ರಹಕ್ಕೆ ನಾಂದಿಯಾಗಿತ್ತೆ?

ನಮ್ಮ ಯುವ ಪೀಳಿಗೆ, ಶ್ರೀ ಉಚ್ಚಿಲರು ಎತ್ತಿದ ಪ್ರಶ್ಣೆಗಳಿಗೆ ಉತ್ತರ ಹುಡುಕುವುದು, ಸೂಕ್ತ ದಾಖಲೆಗಳ ಹುಡುಕಾಟದ ಸವಾಲು ಸ್ವೀಕರಿಸುವುದೇ?

ಉಪೇಂದ್ರ ಹೊಸಬೆಟ್ಟು.

.